ದಿನಾಂಕ**: 20.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

ಪಾಟೀ ಸವಾಲು  ಪ್ರತಿವಾದಿ ಪರ ಶ್ರೀ ಟಿ ವಿ ಸಿ ವಕೀಲರಿಂದಃ-

ದಾವಾ ಸ್ವತ್ತಿನ ಚೆಕ್ಕುಬಂದಿಗೆ ಸಂಬಂಧಿಸಿದಂತೆ ನಿಪಿ.1 ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿಯ ಸುತ್ತಮುತ್ತಲೂ ಮನೆಗಳು ಆಗಿರುತ್ತವೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ಬಾಬಾಜಾನ್ ರವರ ಮನೆ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕುಬಂದಿಗೆ ಸಂಬಂಧಿಸಿದಂತೆ ದಿನಾಂಕ 30.06.2011 ರಂದು ಒಂದು ನೊಂದಾಣಿ ಕ್ರಯಪತ್ರವನ್ನು ಪ್ರತಿವಾದಿಗೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಮರೆಪ್ಪರೆಡ್ಡಿ ಯಿಂದ ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿರುವ ಮರೆಪ್ಪರೆಡ್ಡಿಗೆ ಸೇರಿದ ಸ್ವತ್ತುಗಳನ್ನು ಇತರರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮರೆಪ್ಪರೆಡ್ಡಿಯಿಂದ ಸ.ನಂ.123 ರಲ್ಲಿ 1 ಮುಕ್ಕಾಲು ಗುಂಟೆ ವಿಸ್ತೀರ್ಣದ ಮತ್ತೊಂದು ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತನ್ನು ಈಶ್ವರಮ್ಮರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಆ ಕುರಿತು ಈಶ್ವರಮ್ಮನ ಮೇಲೆ ಓ.ಎಸ್.ನಂ.325/2021 ರೀತ್ಯ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಹೆಂಡತಿ ಮತ್ತು ಮಕ್ಕಳು ಹಾಕಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಆ ದಾವೆಯಲ್ಲಿ ಈ ದಾವಾ ಸ್ವತ್ತನ್ನು ಸೇರಿರುತ್ತಾರೆ ಎಂದರೆ ಸರಿ. ಆ ದಾವೆಯಲ್ಲಿ ನಾನು 1 ನೇ ಪ್ರತಿವಾದಿಯಾಗಿದ್ದು, ಯಾವುದೇ ತಕರಾರು ಸಲ್ಲಿಸಿರುವುದಿಲ್ಲ. ಆ ದಾವೆಯಲ್ಲಿ ನ್ಯಾಯುುತವಾಗಿ ಖರೀದಿ ಮಾಡಿರುವುದರಿಂದ ನಾನು ನನ್ನ ಹೆಂಡತಿಗೆ ಹೇಳಿ ದಾವೆಯನ್ನು ಹಿಂಪಡೆದಿರುತ್ತೇವೆ.  ಸದರಿ ದಾವೆಯ  ಪ್ರತಿವಾದಿ ಆ ದಾವೆಯಲ್ಲಿ 3 ನೇ ಪ್ರತಿವಾದಿಯಾಗಿರುತ್ತಾರೆ ಎಂದರೆ ಸರಿ.

2. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಇ ಖಾತೆ ಆಗಿರುತ್ತದೆ ಎಂದರೆ ಸರಿ. ಸದರಿ ಇ ಖಾತೆ ಪ್ರತಿವಾದಿಯ ಹೆಸರಿನಲ್ಲಿದ್ದು, ಅದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿರುವುದಿಲ್ಲ. ನಾನು ಪ್ರತಿವಾದಿಗೆ ಬಡ್ಡಿ ಕಟ್ಟಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ, ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ನಾನು ಪ್ರತಿವಾದಿಗೆ ಆದಾರ ಮಾಡಿದ ದಿನಾಂಕದಿಂದ ಈ ದಾವೆಯನ್ನು ಸಲ್ಲಿಸುವವರೆಗೂ ಪ್ರತಿ ತಿಂಗಳು 1 ನೇ ತಾರೀಖು ಬಡ್ಡಿ ಕೊಟ್ಟಿರುತ್ತೇನೆ.  ಪ್ರತಿ ತಿಂಗಳು 1 ನೇ ತಾರೀಖು ಬಡ್ಡಿ ಕೊಡುತ್ತೇವೆ ಎಂದು ಮಾತನಾಡಿಕೊಂಡಿರುತ್ತೇವೆ. ಆದರೆ ನಿಪಿ.1 ರಲ್ಲಿ ನಮೂದು ಮಾಡಿರುವುದಿಲ್ಲ. ನಾನು ದಿಬ್ಬೂರಹಳ್ಳಿ ಕೆನರಾ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನಾನು ಪ್ರತಿ ತಿಂಗಳು ಪ್ರತಿವಾದಿಯ ಪಂಚರ್ ಅಂಗಡಿಯ ಬಳಿ ಹೋಗಿ ಬಡ್ಡಿಯನ್ನು ಕೊಡುತ್ತಿದ್ದೆ. ಈ ವಿಚಾರವನ್ನು ನನ್ನ ವಾದ ಪತ್ರದಲ್ಲಿ ಹೇಳಿರುತ್ತೇನೆ.

3. ನಾನು ಎಂ.ವಿ.ಸಿ ಪ್ರಕರಣದಲ್ಲಿ ರೂ.40,000/- ಪರಿಹಾರವನ್ನು ಕಟ್ಟಲು ಆಗುವುದಿಲ್ಲ ಎಂದು ಹೇಳಿ ಜಾರಿ ಪ್ರಕರಣದಲ್ಲಿ ಸಿವಿಲ್ ಬಂಧಿಖಾನೆಗೆ ಹೋಗಿದ್ದೆ ಎಂದರೆ ಸರಿ. 2010 ನೇ ಸಾಲಿನಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಹೌಸ್ ಲಿಸ್ಟ್ ಮಾಡಿಸಿರುತ್ತೇನೆ ಎಂದರೆ ಸರಿ. ಹೌಸ್ ಲಿಸ್ಟ್ ಪ್ರಕಾರ ದಿನಾಂಕ 30.06.2011 ರಲ್ಲಿ ಪ್ರತಿವಾದಿಗೆ ರೂ.1,20,000/- ಗಳಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ, ಆದಾರ ಪತ್ರ ಮಾತ್ರ ಮಾಡಿಕೊಟ್ಟಿರುತ್ತೇನೆ.

**(**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು**,** ನೀಡಲಾಯಿತು**)**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ**.** ಹೇ**.** ಕೇ**.** ಸರಿ ಇದೆ**.**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.